ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.

ಸಿ.ಸಿ.621/2022

| | | |
|---|---|---|
| ಸಾಕ್ಷಿದಾರರ ಹೆಸರುಃ | ಈರಪ್ಪ | ಪ್ರಮಾಣ ವಚನ ಭೋದಿಸಿದ ದಿನಾಂಕಃ |
| | | 18-01-2024 |
| ತಂದೆಯ/ಗಂಡನ ಹೆಸರುಃ | ಕ್ಯಾತಪ್ಪ | ಸಿ.ಡಬ್ಲ್ಯೂಃ1 |
| ವಯಸ್ಸುಃ | 57 ವರ್ಷ | ಪಿ.ಡಬ್ಲ್ಯೂಃ1 |
| ಉದ್ಯೋಗಃ | ವ್ಯವಸಾಯ | |
| ವಾಸಸ್ಥಳಃ | ರಾಮಸಮುದ್ರ , ಅವಳೀಹಟ್ಟಿ | |

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ**

ನನಗೆ ಆರೋಪಿತರ ಪರಿಚಯ ಇದೆ, ಮೃತ ಚಿತ್ತಪ್ಪ ತಂದೆ ನಾಗರಾಜಪ್ಪ, ಮದು ತಂದೆ ಈರಪ್ಪ, ಮತ್ತು ಅಬಿ ತಂದೆ ಚಿತ್ತಪ್ಪ ಇವರ ಪರಿಚಯ ಇದೆ. ಚಾಸಾ-17 ರಿಂದ 20 ರವರ ಪರಿಚಯ ಇದೆ. ಚಾಸಾ-21 ರವರ ಪರಿಚಯ ಇಲ್ಲ.

21 ನೇ ಸಾಲಿನಲ್ಲಿ ಫೆಬ್ರವರಿ ತಿಂಗಳಲ್ಲಿ ದಿನಾಂಕ ನೆನಪಿಲ್ಲ ಆ ದಿನ ಸಂಜೆ 7 ಗಂಟೆ ಸಮಯದಲ್ಲಿ ನಾನು ಮತ್ತು ಅವಳೇಶ ಅವಳೀಹಟ್ಟಿಯಿಂದ ಬೈಕ್‌ನಲ್ಲಿ ಬರುತಿದ್ದೆವು. ಹೊಳಲ್ಕೆರೆಯ ಶ್ರೀನಿವಾಸ ಅಯ್ಯಂಗಾರ ಬೇಕರಿ ಮುಂದೆ ಬರುತಿದ್ದಾಗ ಟ್ರಾಕ್ಟರ ಮತ್ತು ಬೈಕ ನಡುವೆ ಅಪಘಾತ ಆಯಿತು. ಬೈಕಿನಲ್ಲಿ ಒಟ್ಟು 3 ಜನ ಇದ್ದೆವು. ಅವರು ಚಿತ್ತಪ್ಪ, ಮದು ಮತ್ತು ಅಬಿ ಎಂಬುವರಾಗಿದ್ದರು. ಟ್ರಾಕ್ಟರ ಹೊಳಲ್ಕೆರೆ ಕಡೆಯಿಂದ ಅತಿ ಜೋರಾಗಿ ಅದರ ಚಾಲಕ ಚಲಾಯಿಸಿಕೊಂಡು ಬರುತಿದ್ದು ಬೈಕ್ ಅವಳಿಹಟ್ಟಿ ಕಡೆಯಿಂದ ಬರುತಿದ್ದು ಟ್ರಾಕ್ಟರ ಚಾಲಕ ಡಿಕ್ಕಿಪಡಿಸಿದ ಪರಿಣಾಮ ಅಪಘಾತ ಆಗಿರುತ್ತದೆ. ಕೂಡಲೇ ಸ್ಥಳಕ್ಕೆ ಹೋಗಿ ನೋಡಲಾಗಿ ಅವರು ನಮ್ಮ ಊರಿನವರಾಗಿದ್ದರು. ಬೈಕನ್ನು ಚಿತ್ತಪ್ಪ ನಡೆಸುತಿದ್ದು ಉಳಿದಿಬ್ಬರು ಬೈಕಿನ ಹಿಂದೆ ಕುಳಿತಿದ್ದರು. ಚಿತ್ತಪ್ಪ ಸ್ಥಳದಲ್ಲಿ ಮೃತಪಟ್ಟಿದ್ದನು. ಮದು ಹೊಳಲ್ಕೆರೆ ಆಸ್ಪತ್ರೆಯಲ್ಲಿ ತೀರಿಕೊಂಡನು. ಅಬಿ ಶಿವಮೊಗ್ಗಕ್ಕೆ ಕರೆದುಕೊಂಡು ಹೋಗಿದ್ದಾಗ ಅಲ್ಲಿ ತೀರಿಕೊಂಡನು. ಟ್ರಾಕ್ಟರ ನ ನೊಂದಣಿ ಸಂಖ್ಯೆ ಕೆಎ -48-1354 ಎಂದು ಇರಬಹುದು. ಚಿತ್ತಪ್ಪ ಚಲಾಯಿಸುತಿದ್ದ ಬೈಕ ಸಂಖ್ಯೆ ಕೆಎ 16 ಇಕ್ಯೂ 1587 ಆಗಿತ್ತು. ಬೈಕ್ ಜಖಂ ಗೊಂಡಿತ್ತು. ಈ ಬಗ್ಗೆ ಪೊಲೀಸರಿಗೆ ದೂರು ನಾನು ನೀಡಿರುತ್ತೇನೆ. ಪ್ರಥಮ ಮಾಹಿತಿ ಅದೇ ಇರುತ್ತದೆ. ಸದರಿ ದಾಖಲೆಯನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

ಇದೇ ವಿಷಯಕ್ಕೆ ಸಂಬಂದಿಸಿದಂತೆ ಪೊಲೀಸರು ಕರೆದಿದ್ದು ಅಪಘಾತ ಆದ 2 ದಿನದ

ನಂತರ ಕರೆದಿದ್ದರು. ಅಪಘಾತದ ವಿಚಾರ ಕೇಳಿದರು ಹೇಳಿರುತ್ತೇನೆ. ಚಾಲಕನನ್ನು ಆ ದಿನ ನಾನು ನೋಡಿರುವುದಿಲ್ಲ ಊರಿನವರು ಹೇಳಿ ಗೊತ್ತಾಯಿತು. ಈಗ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಸ್ಥಳದಲ್ಲಿ ನೋಡಿರುವುದಿಲ್ಲ. ಆದರೆ ಊರಿನವರು ಹೇಳಿ ಆತನೇ ಚಾಲಕ ಎಂದು ಗೊತ್ತಾಯಿತು ಆತ ನಮ್ಮ ಊರಿನವನೇ ಇರುತ್ತಾನೆ ಆತನ ಹೆಸರು ನಿಂಗಪ್ಪ ತಂದೆ ಈರಪ್ಪ .

(ಈ ಹಂತದಲ್ಲಿ ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ**

ನಾನು ಹೇಳಿದ ಟ್ರಾಕ್ಟರ ನ ನೊಂದಣಿ ಸಂಖ್ಯೆ ಕೆಎ –48– ಟಿ –1365 ಎಂದರೆ ಸರಿ. ಮೋಟಾರ್ ಸೈಕಲ್ ಸಂಖ್ಯೆ ಕೆಎ –16–ಇ ಕ್ಯೂ –5487 ಎಂದರೆ ಸರಿ.

ಆರೋಪಿಯನ್ನು ಪೊಲೀಸ್ ಠಾಣೆಯಲ್ಲಿ 04–01–2022 ಪೊಲೀಸರು ನನ್ನನ್ನು ಕರೆದಿದ್ದರು ಎಂದರೆ ಸರಿ. ಆಗ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ತೋರಿಸಿ ಈತನೇ ಅಪಘಾತ ಪಡಿಸಿದ್ದು ಎಂದು ತಿಳಿಸಿದರು ಎಂದರೆ ಸರಿ ಆತ ಅತಿವೇಗ ಮತ್ತು ಅಜಾಗರೂಕತೆಯಿಂದ ವಾಹನ ಚಾಲನೆ ಮಾಡಿ ಅಪಘಾತ ಪಡಿಸಿದ್ದರಿಂದ ಇಬ್ಬರು ಮೃತಪಟ್ಟರು ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಸಾಕ್ಷಿಗೆ ದಿಃ 04–01–2022 ರ ಸದರಿ ಹೇಳಿಕೆಯ ಬಾಗವನ್ನು ಓದಿ ತೋರಿಸಲಾಗಿ ಒಪ್ಪುತ್ತಾರೆ ಆದ್ದರಿಂದ ಸದರಿ ಹೇಳಿಕೆಯ ಬಾಗವಾದ " ನಾನು ಅವನನ್ನು ನೋಡಿ ಗುರುತಿಸಿದೆನು-----ನಿಂಗಪ್ಪ ತಂದೆ ಈರಪ್ಪ ಇವನ ಅತಿವೇಗ ಮತ್ತು ಅಜಾಗರೂಕತೆಯ ವಾಹನ ಚಾಲನೆಯಿಂದ ಸಂಬವಿಸಿರುತ್ತದೆ ಎಂದು ಈ ನನ್ನ ಮರುಹೇಳಿಕೆ ನೀಡಿರುತ್ತೇನೆ " ಎಂಬ ಬಾಗವನ್ನು ನಿಪಿ–2 ಎಂದು ಗುರುತಿಸಲಾಯಿತು .

**ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ–**

ಅವಳೇಶ ಹಾಗೂ ನಾನು ಸಂಜೆ 6.45 ಕ್ಕೆ ಊರನ್ನು ಬಿಟ್ಟು ಬರುತಿದ್ದೆವು. ನಮಗೂ ಮತ್ತು ಚಿತ್ತಪ್ಪ ಹೋಗುತಿದ್ದ ಬೈಕಿಗೂ 300 ಮೀ ಅಂತರ ಇತ್ತು. ನಾವು ಸುಮಾರು 20 ಕಿ ಮೀ ವೇಗದಲ್ಲಿ ಬರುತಿದ್ದೆವು. ಹೊಳಲ್ಕೆರೆಯಿಂದ ಅವಳಿಹಟ್ಟಿಗೆ ಹೋಗುವ ರಸ್ತೆಗೆ ಬಹಳಷ್ಟು ಅಂಕು ಡೊಂಕು ಇದೆ ಎಂದರೆ ಸರಿ. ನಾನು ಹೇಳಿದ ಸಮಯದಂದು ರಸ್ತೆಯ ಅಕ್ಕಪಕ್ಕ ಬೆಳೆ ಬೆಳೆದಿದ್ದವು ಎಂದರೆ ಸರಿ. ಆಗಾಗಿ ನಾವು ನಿದಾನಕ್ಕೆ ಬೈಕ್ ಚಾಲನೆ ಮಾಡುತ್ತೇವೆ ಎಂದರೆ ಸರಿ. ಆದ್ದರಿಂದ ಯಾರೇ ಆದರೂ ಬೈಕ್ ನಿದಾನಕ್ಕೆ ಚಾಲನೆ ಮಾಡಬೇಕು ಎಂದರೆ ಸರಿ.

ಅಪಘಾತ ಆದ ನಂತರ ಸ್ಥಳಕ್ಕೆ ಹೋದೆವು. ನಾವು ಸ್ಥಳಕ್ಕೆ ಹೋದಾಗ ಟ್ರಾಕ್ಟರ ಚಾಲಕ ಇರಲಿಲ್ಲ. ನಾವು ಅಪಘಾತವನ್ನು ಆದ್ದರಿಂದ ನೋಡಲು ಆಗಿಲ್ಲ ಎಂದರೆ ಸರಿಯಲ್ಲ. ಮೃತ ಪಟ್ಟ ವ್ಯಕ್ತಿಗಳ ಪೈಕಿ ಒಬ್ಬ ನನ್ನ ಸೋದರ ಸಂಬಂದಿ. ಅವರಿಗೆಲ್ಲಾ 20 ರಿಂದ 21 ವರ್ಷ ವಯಸ್ಸಾಗಿತ್ತು. ಅವರಿಗೆ ಯಾರಿಗೂ ಸಹ ಬೈಕ ಚಾಲನಾ ಪರವಾನಗಿ ಇತ್ತೊ ಇಲ್ಲವೊ ನನಗೆ ಗೊತ್ತಿಲ್ಲ.

ಠಾಣೆಗೆ ಹೋದಾಗ ಈತನೇ ಚಾಲಕ ಎಂದು ಅಪಘಾತ ಆದ 2 ದಿನದ ನಂತರ ನನಗೆ ತೋರಿಸಿದರು. ಆ ರೀತಿ ಎರಡು ದಿನದ ನಂತರ ಆರೋಪಿಯನ್ನು ನನಗೆ ತೋರಿಸಿಲ್ಲ ಆದರೂ ನಾನು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

1 ನೇ ಆರೋಪಿ ನಿಂಗಪ್ಪ ನಮ್ಮ ಊರಿನವನು ಎಂದರೆ ಸರಿ. ಆತನಿಗೂ ನಮಗೂ ಹಳೇ ವೈಶಮ್ಯ ಇದೆ ಎಂದರೆ ಸರಿಯಲ್ಲ. ಆದ್ದರಿಂದ ಆತನ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಮತ್ತು ಸುಳ್ಳು ದೂರನ್ನು ನೀಡಿದ್ದೇನೆ  ಎಂದರೆ ಸರಿಯಲ್ಲ. ಆದೇ ರೀತಿ ನಾನು ಠಾಣೆಗೆ ಹೋಗಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸೋದರ ಸಂಬಂದಿ ಮತ್ತು ಚಿತ್ತಪ್ಪ ನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಒಟ್ಟಾರೆ ಅಪಘಾತ ಆಗಿದ್ದು ಮಾತ್ರ ನಿಜ ಎಂದು ನುಡಿಯುತ್ತಾರೆ.

ನಾನು ಹೇಳಿದ ಅಪಘಾತ ಆಯಿತು ಎಂದು ಹೇಳಿದ ಸಮಯ ಕತ್ತಲು ಸಮಯ ಎಂದರೆ ಸರಿ. ನಾನು ಹೇಳಿದ ಮೂರು ಜನ ಅತಿವೇಗ ಮತ್ತು ಅಜಾಗರೂಕತೆಯಿಂದ ಬೈಕ ಚಾಲನೆ ಮಾಡಿ ಅಪಘಾತ ಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿ ನಿಂಗಪ್ಪನು ಟ್ರಾಕ್ಟರ ಚಾಲಕನಲ್ಲ ಎಂದರೆ ಸರಿಯಲ್ಲ. ಆತ ಯಾವತ್ತು ಟ್ರಾಕ್ಟರ ಚಾಲನೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಸೋದರ ಸಂಬಂದಿ ಎಂದು ಹೇಳುವ ವ್ಯಕ್ತಿ ಮದು ಎಂದರೆ ಸರಿ. ಹಾಗಾಗಿ ಅಪಘಾತದ ಪರಿಹಾರ ಪಡೆಯುವ ಉದ್ದೇಶಕ್ಕೆ ಈ ರೀತಿ ಸುಳ್ಳು ಆರೋಪಣೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಲಕ ಯಾರು ಎಂದು ಮೊದಲು ಗೊತ್ತಿರಲಿಲ್ಲ ಎಂದರೆ ಸರಿ. ಹಾಗಾಗಿ ಊರಿನವರ ಆರೋಪಿಗೆ ಆಗದವರ ಮಾತು ಕೇಳಿ ಆರೋಪಿ ಟ್ರಾಕ್ಟರ ಚಲಾಯಿಸಿ ಅಪಘಾತ ಪಡಿಸಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಊರಿನವರು ಹೇಳಿ ಆರೋಪಿ ಟ್ರಾಕ್ಟರ ಚಾಲಕ ಎಂದು ಗೊತ್ತಾಯಿತು ಎಂದು ಪುನಃನುಡಿಯುತ್ತಾರೆ. 1 ನೇ ಆರೋಪಿಗೂ ಈ ಅಪಘಾತಕ್ಕೂ ಮತ್ತು ಟ್ರಾಕ್ಟರ ಗೂ ಸಹ ಸಂಬಂದ ಇಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಕೃಷಿ ಕಾರ್ಮಿಕನಾಗಿ ಕೆಲಸ ಮಾಡುತ್ತಾನೆ ಎಂದರೆ ಸರಿ .

**ಪಾಟೀ ಸವಾಲುಃ 2 ನೇ ಆರೋಪಿ ಪರ ವಕೀಲರಿಂದಃ-**

ಅಪಘಾತವು ಸಂಜೆ ಸಮಯದಲ್ಲಿ ಆಗಿದೆ ಎಂದು ಹೇಳಿದ್ದು 2 ನೇ ಆರೋಪಿ ಚೌಡಪ್ಪನು ಅಪಘಾತ ಪಡಿಸಿದೆ ಎಂದು ಹೇಳುವ  ಟ್ರಾಕ್ಟರ ನ ಮಾಲೀಕನಾಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ಅಪಘಾತಕ್ಕೂ 2 ನೇ ಆರೋಪಿಗೂ ಮತ್ತು ಟ್ರಾಕ್ಟರ ಗೂ ಸಹ ಯಾವುದೇ ರೀತಿ ಸಂಬಂದ ಇಲ್ಲ ಎಂದರೆ ಸರಿಯಲ್ಲ.  2 ನೇ ಆರೋಪಿಯ ಟ್ರಾಕ್ಟರ ಈ ಅಪಘಾತದಲ್ಲಿ ಬಾಗಿಯಾದ ಬಗ್ಗೆ ಆತನಿಗೆ ಮಾಹಿತಿ ಇಲ್ಲ ಕಾರಣ ಆತ ಆ ಸಮಯದಲ್ಲಿ ಟ್ರಾಕ್ಟರ ನ್ನು ತಾನು ಹೊಂದಿರಲಿಲ್ಲ ಮತ್ತು 1 ನೇ ಆರೋಪಿಗೆ ಸದರಿ ಟ್ರಾಕ್ಟರನ್ನು ಚಾಲನೆ ಮಾಡಲು ಕೊಟ್ಟಿರಲಿಲ್ಲ ಮತ್ತು ಅಪಘಾತದ ಬಗ್ಗೆ ಆತನಿಗೆ ಯಾವುದೇ ಮಾಹಿತಿ ಕೂಡ ಇಲ್ಲ ಈ ಕಾರಣಕ್ಕೆ  2 ನೇ ಆರೋಪಿಗೂ  ಅಪಘಾತಕ್ಕೂ ಮತ್ತು 1 ನೇ ಆರೋಪಿಗೂ ಹಾಗೂ ಅಪಘಾತಪಡಿಸಿದೆ ಎಂದು ಹೇಳುವ ಟ್ರಾಕ್ಟರ ಗೂ

ಯಾವುದೇ ರೀತಿ ಸಂಬಂದ ಇಲ್ಲ ಆತನ ವಿರುದ್ಧ ವಿನಾ ಕಾರಣ ಸುಳ್ಳು ಮಾಹಿತಿ ನೀಡಲಾಗಿದೆ ಎಂದರೆ ಸರಿಯಲ್ಲ. 2 ನೇ ಆರೋಪಿ ಅಪಘಾತ ಸಮಯದಲ್ಲಿ ಮಾಲೀಕ ಆಗದೇ ಇರುವುದರಿಂದ ಈಗಲೂ ಸಹ ಟ್ರಾಕ್ಟರ ಪೊಲೀಸ ಠಾಣಾ ಆವರಣದಲ್ಲಿಯೇ ಇದೆ ಎಂದರೆ ನನಗೆ ಗೊತ್ತಿಲ್ಲ. ಅದೇರೀತಿ ಮೋಟಾರ ಸೈಕಲ ಕೂಡ ಠಾಣೆಯಲ್ಲಿಯೇ ಇದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ನನ್ನ ಸೋದರ ಸಂಬಂದಿಯ ಕುಟುಂಬದ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ತಕ್ಕಂತ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಹೊಳಲ್ಕೆರೆ